ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001,

ಸಂಖ್ಯೆ:ಕಾಶಿಇ/ಶೈವಿ/37/ಶಿ.ದಿ.ವಂತಿಗೆ/2016-17

ದಿನಾಂಕ:03.05.2017.

## ಸುತ್ತೋಲೆ

ವಿಷಯ: ಶಿಕ್ಷಕರ ದಿನಾಚರಣೆ ಬಾವುಟಗಳ ಮಾರಾಟದಿಂದ ವಂತಿಗೆ ಸಂಗ್ರಹಿಸುವ ಬಗ್ಗೆ.

* * * * * * *

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ(NFTW) ವತಿಯಿಂದ ಪ್ರತಿ ವರ್ಷವೂ ಸೆಪ್ಟಂಬರ್ 5 ರಂದು "ಶಿಕ್ಷಕರ ದಿನಾಚರಣೆ"ಯನ್ನು ಆಚರಿಸಲಾಗುತ್ತಿದ್ದು, ಇದರ ಅಂಗವಾಗಿ ಹೊರತಂದಿರುವ ಬಾವುಟಗಳನ್ನು ವಿದ್ಯಾರ್ಥಿ ಹಾಗೂ ಶಿಕ್ಷಕ ವರ್ಗದವರಿಗೆ ಮಾರಾಟ ಮಾಡಿ, ಇದರಿಂದ ಬರುವ ವಂತಿಗೆಯಿಂದ ವಿದ್ಯಾರ್ಥಿಗಳ ಹಾಗೂ ಶಿಕ್ಷಕ ವರ್ಗದವರಿಗೆ ಹಲವಾರು ಉಪಯುಕ್ತವಾದಂತಹ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ಘನತೆಯನ್ನು ಹೆಚ್ಚಿಸುವುದು ರಾಜ್ಯದಲ್ಲಿರುವ ಪ್ರತಿಯೊಬ್ಬ ಶಿಕ್ಷಕರ ಜವಾಬ್ದಾರಿಯಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದನಿಮಿತ್ತ ಕಾರ್ಯದರ್ಶಿ/ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು ಇವರ ಕಛೇರಿಯಿಂದ ಸರಬರಾಜು ಮಾಡಿರುವ ಶಿಕ್ಷಕರ ದಿನಾಚರಣೆ ಬಾವುಟಗಳನ್ನು (ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ) ಕಡ್ಡಾಯವಾಗಿ ಮಾರಾಟ ಮಾಡಿ, ವಂತಿಗೆಯನ್ನು ಸಂಗ್ರಹಿಸುವುದು. ಹೀಗೆ ಸಂಗ್ರಹಿಸಿದ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ವಂತಿಗೆಯನ್ನು ಕಾರ್ಯದರ್ಶಿ / ಖಜಾಂಚಿಗಳು, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಬೆಂಗಳೂರು ಇವರ ಖಾತೆಗೆ ಜಮಾ ಮಾಡುವಂತೆ ಸೂಚಿಸಲಾಗಿದೆ. ಯಾವುದೇ ಕಾರಣಕ್ಕೂ ಬಾವುಟಗಳನ್ನು ಮಾರಾಟ ಮಾಡದೆ ಹಿಂದಿರುಗಿಸಬಾರದೆಂದು ಈ ಮೂಲಕ ತಿಳಿಸಿದೆ.

ಮುಂದುವರೆದು, ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ಇತರೆ ಶುಲ್ಕಗಳೊಂದಿಗೆ ಶಿಕ್ಷಕರ ಕಲ್ಯಾಣ ನಿಧಿ(KSTBF)ಗೆ ಸಂಗ್ರಹಿಸುವ ರೂ.25/- ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ(KSSWF)ಗೆ ಸಂಗ್ರಹಿಸುವ ರೂ.25/-ಗಳನ್ನು ಮತ್ತು ಶಿಕ್ಷಕರ ದಿನಾಚರಣೆ ಬಾವುಟಗಳ ಮಾರಾಟದಿಂದ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ(NFTW) ಗೆ ಪಾವತಿಸುವ ವಂತಿಗೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಚಲನ್ ಮೂಲಕ ರಾಜ್ಯದ ಯಾವುದೇ ಎಸ್.ಬಿ.ಎಂ. ಬ್ಯಾಂಕ್‌ನಲ್ಲಿ ಅಥವಾ ಬ್ಯಾಂಕ್ ಹುಂಡಿ ಮೂಲಕ ನಿಧಿಗಳ ಮೂರು ಖಾತೆಗಳಿಗೆ ಪ್ರತ್ಯೇಕವಾಗಿಯೇ ಜಮಾ ಮಾಡಿ, ನಿಧಿಗಳ ಕಛೇರಿಗೆ ವಿವರ ಸಲ್ಲಿಸುವುದು.

ಈ ಸಂಬಂಧ ಯಾವುದೇ ಸ್ಪಷ್ಟೀಕರಣಕ್ಕಾಗಿ ಕಾರ್ಯದರ್ಶಿಗಳು/ ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗಳ ಕಛೇರಿ, ಶಿಕ್ಷಕರ ಸದನ, ಕಾವೇರಿ ಭವನದ ಎದುರು, ಕೆಂಪೇಗೌಡ ರಸ್ತೆ, ಬೆಂಗಳೂರು-560002, ಇವರೊಂದಿಗೆ ನೇರ ಪತ್ರ ವ್ಯವಹಾರವನ್ನು ಮಾಡುವುದು. ದೂರವಾಣಿ ಸಂ:080-22483434, ಫ್ಯಾಕ್ಸ್:080-22483860, e-mail ID: kstbf63@gmail.com

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ,**

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ - ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಪ್ರಾದೇಶಿಕ ಜಂಟಿ ನಿರ್ದೇಶಕರ ಮೂಲಕ)
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾ.ಶಿ.ಆ. ಕಛೇರಿ, ಬೆಂಗಳೂರು - ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದನಿಮಿತ್ತ ಕಾರ್ಯದರ್ಶಿ/ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು
3. ಕಛೇರಿ ಪ್ರತಿ.